ಅ) ಈ ಮ್ಯೂಸಿಯಂಗಳ ದುರಸ್ತಿಗಾಗಿ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು 1995-96 ಖರ್ಚು ಮಾಡಿದ ಹಣವೆಷ್ಟು?

ಇ) ಹಲವಾರು ಮ್ಯೂಸಿಯಂಗಳ ಕಟ್ಟಡಗಳು ಅಪಾಯದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಕಟ್ಟಡಗಳು ದುರಸ್ಥಿಯಾಗದೇ ಇರುವುದರಿಂದ ಈ ಮ್ಯೂಸಿಯಂಗಳಲ್ಲಿರುವ ಅಮೂಲ್ಯ ವಸ್ತುಗಳು ಹಾಳಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) 1996-97ರಲ್ಲಿ ಈ ಎಲ್ಲಾ ಮ್ಯೂಸಿಯಂಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಹಾಗೂ ದುರಸ್ತಿ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಒಟ್ಟು ಹತ್ತು ಸಂಗ್ರಹಾಲಯಗಳು ಹಾಗೂ ಒಂದು ಕಲಾಶಾಲೆ ಇದೆ.

ಆ) ರೂ. 30.00 ಲಕ್ಷ

ಇ) ಇಲ್ಲ

ಈ) ಇಂಥಹ ಪ್ರಕರಣಗಳು ಯಾವುದೂ ಉದ್ಭವವಾಗಿರುವುದಿಲ್ಲ.

ಉ) ರೂ. 30.00 ಲಕ್ಷ

ಆರ್.ಎ.ಡಿ.ಗಳಲ್ಲಿ ವೈದ್ಯರು ಮತ್ತು ಔಷಧಿಗಳ ಕೊರತೆ

1029 - ಶ್ರೀ ರವಿಕಾಂತ ಎನ್. ಪಾಟೀಲ್ : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತ ಕ್ಷೇತ್ರದಲ್ಲಿ ಇರುವ ಆರ್.ಎ.ಡಿ.ಗಳು ಎಷ್ಟು?

ಆ) ಮೇಲ್ಕಂಡ ಆರ್.ಎ.ಡಿ.ಗಳಲ್ಲಿ ವೈದ್ಯರು ಮತ್ತು ಔಷಧಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 16

ಆ) ಹೌದು

ಇ) ಔಷಧಿಗಳಿಗೆ ಪ್ರತಿ ವರ್ಷ ಹೆಚ್ಚಿನ ಮೊತ್ತ ನಿಗಧಿಪಡಿಸಲಾಗುತ್ತಿದೆ. ಖಾಲಿ ಇರುವ ಕೆಲವು ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇಂಡಿ ಮತಕ್ಷೇತ್ರಕ್ಕೆ ಆರ್.ಎ.ಡಿ. ಮಂಜೂರಾತಿ

1028 - ಶ್ರೀ ರವಿಕಾಂತ ಎನ್. ಪಾಟೀಲ್ (ಇಂಡಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಸೇರಿರುವುದರಿಂದ ಮುಂದಿನ ಆಯವ್ಯಯದಲ್ಲಿ ಮೂರು ಆರ್.ಎ.ಡಿ. ಮಂಜೂರಾತಿ ಮಾಡಲು ಉದ್ದೇಶಿಸಲಾಗಿದೆಯೇ?